ದಿನಾಂಕಃ 12.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಎ.ಕೆ.ಎಸ್. ವಕೀಲರಿಂದ:**

ಅಸದು ದಾವಾ 149/1999 ರ ದಾವೆಯಲ್ಲಿ ನನ್ನ ಪರವಾಗಿ ಆದೇಶ ಆಗದೇ ಇದ್ದ ಕಾರಣ ಅಸಲು ದಾವಾ 34/2004 ನ್ನು ದಾಖಲು ಮಾಡಿದ್ದೆ ಎಂದರೆ ಸರಿ. ಅಸಲು ದಾವಾ 34/2004 ರಲ್ಲಿ ಕುಟುಂಬದ ಸ್ವತ್ತನ್ನು ವಿಭಾಗ ಕೋರಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯನ್ನು 13 ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ 12 ನೇ ಸ್ವತ್ತಾದ ಸ.ನಂ.503/2 ರ ಸ್ವತ್ತಿಗೂ ಸಂಬಂಧಿಸಿದಂತೆ ವಿಭಾಗವನ್ನು ಕೋರಿದ್ದೆ ಎಂದರೆ ಸರಿ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕಿಲ್ಲ ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಅಸಲು ದಾವಾ 34/2004 ವಜಾಗೊಂಡ ನಂತರ ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಂಖ್ಯೆ 173/2011 ರಡಿಯಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯಕ್ಕೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೇಲ್ಮನವಿ ಸಂಖ್ಯೆ 173/2011 ವಜಾಗೊಂಡಿರುವುದು ಸತ್ಯ ಎಂದು ನುಡಿಯುತ್ತಾರೆ. ಅಸಲು ದಾವಾ 149/1999 ರಲ್ಲಿ ನನ್ನ ಪರವಾಗಿ ಯಾವುದೇ ಡಿಕ್ರಿಯಾಗಿಲ್ಲ ಎಂದರೆ ಸರಿ. ಅಸಲು ದಾವಾ 149/1999 ಮತ್ತು ಪ್ರಸ್ತುತ ಪ್ರಕರಣದಲ್ಲಿ ಆದೇಶ ಕೋರಿರುವ ಸ್ವತ್ತುಗಳು ಒಂದೇ ಎಂದರೆ ಸರಿ.

ವಿಭಾಗ ಕೋರಿರುವ ಸ್ವತ್ತು ಮತ್ತು ಪ್ರಸ್ತುತ ಪ್ರಕರಣದಲ್ಲಿ ಆದೇಶ ಕೋರುತ್ತಿರುವ ಸ್ವತ್ತು ಎರಡು ಒಂದೇ ಎಂದರೆ ಸರಿ. ವಾದಿಗಳಿಗೆ ಅವರ ತಂದೆಯಿಂದ ಬಂದಂತಹ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯವರ ಸ್ವಾಧೀನಾನುಭವ ಸ್ವತ್ತಿಗೆ ತೊಂದರೆ ಕೊಡಲು ನನಗೆ ಯಾವುದೇ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯವರು ತಮ್ಮ ದಾವಾ ಸ್ವತ್ತಿಗೆ ಹೋದಾಗಲೆಲ್ಲ ಗಲಾಟೆ ಮಾಡುತ್ತೇವೆ ಎಂದರೆ ಸಾಕ್ಷಿಯು ಅವರು ಸ್ವತ್ತಿನ ಕಡೆ ಬರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ದಾವಾ ಸ್ವತ್ತಿಗೆ ಕಡೆ ಬಂದಾಗ ನಾನು ಅವರಿಗೆ ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ವಾದಿಗಳ ಜಮೀನಿನಲ್ಲಿ ನಾವು ಅಕ್ರಮವಾಗಿ ಕಾಫೀ ಬೆಳೆಯನ್ನು ಕೊಯ್ಲು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ನಾವೇ ನೋಡಿಕೊಳ್ಳುತಿದ್ದೇವೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ನಮಗೆ ಯಾವುದೇ ಹಕ್ಕಿಲ್ಲದ್ದಿದರೂ ನಾವು ಸದರಿ ಸ್ವತ್ತಿನಲ್ಲಿ ಅಕ್ರಮವಾಗಿ ಇರುತ್ತೇವೆ ಸಾಕ್ಷಿಯು ಸದರಿ ಸ್ವತ್ತು ನಮ್ಮ ಸ್ವಾಧೀನಾನುಭವದಲ್ಲಿರುತ್ತದೆ ಎಂದು ನುಡಿಯುತ್ತಾರೆ. ವಾದಿಗಳು ಈಗಲೂ ಅವರ ಜಮೀನಿನಲ್ಲಿ ಕೆಲಸ ಮಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ವಾದಿಗಳು ಮಂಗಳೂರಿನಲ್ಲಿ ವಾಸಿಸುತ್ತಿರುವ ಕಾರಣ ಅವರಕಡೆ ಕೆಲಸದವರನ್ನು ಕೆಲಸ ಮಾಡದಂತೆ ತಡೆದು ಬೆದರಿಸುತಿದ್ದೇವೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಆದೇಶವು ಅವರ ಪರವಾಗಿ ಮಾಡಿದ್ದಲ್ಲಿ ನಮಗೆ

ತೊಂದರೆಯುಂಟಾಗುತ್ತದೆ. ಪ್ರಸ್ತುತ ದಾವೆಯ ಸ್ವತ್ತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಿಂದ ಯಾವುದೇ ತಡೆಯಾಜ್ಞೆ ಇಲ್ಲ ಎಂದರೆ ಸರಿ. ನಾನು ಮತ್ತು ವಾದಿಯೂ ಸಹೋದರರು ಎಂದರೆ ಸರಿ. ಅಸಲು ದಾವಾ ಸಂಖ್ಯೆ 34/2004 ರ ಶೆಡ್ಯೂಲ್ ಸ್ವತ್ತು ಸಂಖ್ಯೆ 1 ರಿಂದ 11 ಮತ್ತು 13 ರ ಸ್ವತ್ತಿನಲ್ಲಿ ನಾನೇ ಸ್ವಾಧೀನಾನುಭವದಲ್ಲಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತಿನ ಸಂಖ್ಯೆಯ 12 ನ್ನು ಹೊರತು ಪಡಿಸಿ ಇತರ ಎಲ್ಲಾ ಜಮೀನಿನಲ್ಲೂ ಎಲ್ಲರಿಗೂ ವಿಭಾಗವನ್ನು ನೀಡಬೇಕು ಎಂದು ಆದೇಶವಾಗಿದೆ ಎಂದರೆ ಸಾಕ್ಷಿಯು ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಚಾಲ್ತಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಂಬಂಧ ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಪ್ರಮಾಣ ಪತ್ರವನ್ನು ಹೊರತುಪಡಿಸಿ ಇತರೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪರವಾಗಿ ಯಾವುದೇ ದಾಖಲಾತಿಯನ್ನು ಗುರುತಿಸಿರದ ಕಾರಣ ನನಗೆ ತಿಳಿದಿರುವುದಿಲ್ಲ. ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪರವಾಗಿ ಯಾವುದೇ ಆದೇಶವಾಗಿರದ ಕಾರಣ ವಾದಿಗಳಿಗೆ ವಿನಾಕಾರಣ ಹಿಂಸೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪರವಾಗಿ ನ್ಯಾಯಾಲಯದಿಂದ ನಿರ್ಭಂಧಕಾಜ್ಞೆ ಆದೇಶ ಇರುತ್ತದೆ ಎಂದರೆ ಸರಿ. ಸದರಿ ಆದೇಶ ಇದ್ದರೂ ನಾನು ವಾದಿಗಳಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.